**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ಇವರು ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:**

**ಕರ್ನಾಟಕ ಉಪ ಲೋಕಾಯುಕ್ತ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಮತ್ತು ಕರ್ನಾಟಕ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರೂ ಸೇರಿದಂತೆ ಮೂರು ಸಾಂವಿಧಾನಿಕ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ತುರ್ತಾಗಿ ಭರ್ತಿ ಮಾಡಬೇಕಾಗಿದೆ. ನಿಯಮದಂತೆ ಸಾಂವಿಧಾನಿಕ ಹುದ್ದೆಗಳು ಖಾಲಿಯಾಗುವ ಮೂರು ತಿಂಗಳು ಮುನ್ನವೇ ಸರಕಾರ ನೇಮಕ ಪ್ರಕ್ರಿಯೆ ಪ್ರಾರಂಭಿಸಿ, ಹುದ್ದೆಯಲ್ಲಿದ್ದವರ ಸೇವಾವಧಿ ಮುಕ್ತಾಯವಾಗುವುದರೊಳಗೆ ಆ ಹುದ್ದೆಗೆ ಅರ್ಹರ ನೇಮಕ ಮಾಡಬೇಕು. ಆದರೆ, ಇತ್ತೀಚಿನ ವರ್ಷಗಳಲ್ಲಿ ಯಾವ ಸರಕಾರಗಳೂ ಈ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಎಲ್ಲಾ ಸರಕಾರಗಳು ಒಂದಲ್ಲ ಒಂದು ಕಾರಣ ನೀಡಿ ಸಾಂವಿಧಾನಿಕ ಹುದ್ದೆಗಳ ನೇಮಕ ಕಡೆಗಣಿಸುತ್ತಲೇ ಇವೆ. ಈ ವಿಷಯವು ಸಾರ್ವಜನಿಕರ ಮಹತ್ವದ್ದಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ.**

**ಉತ್ತರ**

**ಕರ್ನಾಟಕ ಉಪಲೋಕಾಯುಕ್ತರ ಹುದ್ದೆ ಭರ್ತಿ ಮಾಡುವ ಬಗ್ಗೆ.**

ಮಾನ್ಯ ಉಪಲೋಕಾಯುಕ್ತರಾಗಿದ್ದ ನ್ಯಾ.ಭೀಮನಗೌಡ ಸಂಗನಗೌಡ ಪಾಟೀಲ್ ಇವರನ್ನು ಅಧಿಸೂಚನೆ ಸಂಖ್ಯೆ: ಸಿಆಸುಇ 01 ಸೇಲೋಯು 2022, ದಿನಾಂಕ: 14.06.2022ರ ಅಧಿಸೂಚನೆಯಲ್ಲಿ ಕರ್ನಾಟಕ ಲೋಕಾಯುಕ್ತರನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 3(2)(ಬಿ)ರ ಪ್ರಕಾರ ಉಪಲೋಕಾಯುಕ್ತರ ನೇಮಕಾತಿ ವಿಧಾನವು ಈ ಕೆಳಕಂಡಂತಿದೆ:-

> "**3(2)(b)** A person to be appointed as an Upalokayukta shall be a person who has held the office of a judge of a High Court 1[for not less than five years]1 and shall be appointed on the advice tendered by the Chief Minister in consultation with the Chief Justice of the High Court of Karnataka, the Chairman, Karnataka Legislative Council, the Speaker, Karnataka Legislative Assembly, the Leader of the Opposition in the Karnataka Legislative Council and the Leader of the Opposition in the Karnataka Legislative Assembly."

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 3(2)(ಬಿ)ರನ್ವಯ ಉಪಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಮಹನೀಯರೊಂದಿಗೆ ಸಮಾಲೋಚಿಸಿ ಮಾನ್ಯ ರಾಜ್ಯಪಾಲರಿಗೆ ಸೂಕ್ತ ಹೆಸರನ್ನು ಶಿಫಾರಸ್ಸು ಮಾಡಬೇಕಾಗಿರುತ್ತದೆ.

1. ಕರ್ನಾಟಕ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು
2. ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
3. ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು
4. ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಸಭೆ
5. ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು.

ಅದರನ್ವಯ ಮೇಲ್ಕಂಡ ಮಹನೀಯರುಗಳಿಗೆ ಹಿಂದಿನ ಮಾನ್ಯ ಮುಖ್ಯಮಂತ್ರಿಯವರಿಂದ ದಿನಾಂಕ:08.07.2022ರಂದು ಅರೆ ಸರ್ಕಾರಿ ಪತ್ರ ಹೊರಡಿಸಿ ಉಪ ಲೋಕಾಯುಕ್ತರ ಹುದ್ದೆಗೆ ಸೂಕ್ತ ಹೆಸರನ್ನು ಶಿಫಾರಸ್ಸು ಮಾಡುವಂತೆ ಕೋರಲಾಗಿರುತ್ತದೆ. ಈ ಸಂಬಂಧ ಸೂಕ್ತ ಹೆಸರುಗಳನ್ನು ಶಿಫಾರಸ್ಸು ಮಾಡಿರುವ ಬಗ್ಗೆ ಮಾಹಿತಿ ನಿರೀಕ್ಷಿಸಲಾಗಿತ್ತು.

ಏತನ್ಮಧ್ಯೆ, ನೂತನ ಸರ್ಕಾರ ರಚನೆಯಾಗಿದ್ದು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಉಪಲೋಕಾಯುಕ್ತರ ಹುದ್ದೆಗೆ ನೂತನ ಉಪಲೋಕಾಯುಕ್ತರನ್ನು ನೇಮಕ ಮಾಡುವ ಸಂಬಂಧ ಮೇಲ್ಕಂಡಂತೆ ನಿಗದಿಪಡಿಸಲಾದ ವಿಧಾನದ ಅನುಸಾರ, ಕರ್ನಾಟಕ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ವಿಧಾನ ಸಭೆಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿಗಳು ಹಾಗೂ ವಿಧಾನ ಮಂಡಲದ ಉಭಯ ಸದನಗಳ ವಿರೋಧ ಪಕ್ಷದ ನಾಯಕರುಗಳೊಂದಿಗೆ ಸಮಾಲೋಚಿಸಿ ಮಾನ್ಯ ಮುಖ್ಯಮಂತ್ರಿಯವರು ಮಾನ ರಾಜ್ಯಪಾಲರಿಗೆ ಮಾನ್ಯ ಉಪಲೋಕಾಯುಕ್ತರ ನೇಮಕಾತಿಗಾಗಿ ಸೂಕ್ತ ಹೆಸರನ್ನು ಶಿಫಾರಸ್ಸು ಮಾಡುವ ಸಲುವಾಗಿ ಮೇಲ್ಕಂಡ ಮಹನೀಯರುಗಳ ಅಭಿಪ್ರಾಯವನ್ನು ಪಡೆಯುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

**<u>ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಹುದ್ದೆ ಭರ್ತಿ ಮಾಡುವ ಬಗ್ಗೆ.</u>**

ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಇವರು Protection of Human Rights Act, 1993 (Prior to Amendment) ರನ್ವಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ನೂತನ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡುವಂತೆ ಕೋರಿ ದಿನಾಂಕ: 10.11.2022 ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ (ಅನುಬಂಧ-1). ಸದರಿ ಪ್ರಸ್ತಾವನೆಯು ಶಾಖೆಯಲ್ಲಿ ದಿನಾಂಕ: 17.11.2022ರಂದು ಸ್ವೀಕೃತಗೊಂಡಿರುತ್ತದೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು & ಸದಸ್ಯರುಗಳ ಅಧಿಕಾರವಧಿಯು ಫೆಬ್ರುವರಿ-2023 ಕ್ಕೆ ಮುಕ್ತಾಯಗೊಳ್ಳಲಿದರಿಂದ, ನೂತನ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡುವ ಪ್ರಸ್ತಾವನೆಯನ್ನು ಹಿಂದಿನ ಕಾನೂನು ಸಚಿವರ ಅನುಮೋದನೆ ಕೋರಿ ಕಡತ ಸಂಖ್ಯೆ: ಲಾ-ಹೆಚ್‌ಆರ್‌ಸಿ/26/2022 ಅನ್ನು ದಿನಾಂಕ: 03.12.2022ರಂದು ಸಲ್ಲಿಸಲಾಗಿತ್ತು.

ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ಕಲಂ 22 (1) ರನ್ವಯ ಇರುವ ಸಮಿತಿಯಿಂದ ನಾಮ ನಿರ್ದೇಶನ ಮಾಡಲ್ಪಡುವವರನ್ನು ಗೌರವಾನ್ವಿತ ರಾಜ್ಯಪಾಲರು ಸದಸ್ಯರನ್ನಾಗಿ ನೇಮಿಸಿ ಆದೇಶ ಹೊರಡಿಸಬೇಕಾಗಿರುತ್ತದೆ.

ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:-

1) ಮುಖ್ಯಮಂತ್ರಿ - ಅಧ್ಯಕ್ಷರು
2) ವಿಧಾನಸಭಾಧ್ಯಕ್ಷರ - ಸದಸ್ಯರು
3) ರಾಜ್ಯ ಗೃಹ ಇಲಾಖೆಯ ಪ್ರಭಾರದಲ್ಲಿರುವ ಸಚಿವರು - ಸದಸ್ಯರು
4) ವಿಧಾನಸಭೆಯ ವಿರೋಧ ಪಕ್ಷದ ನಾಯಕರು - ಸದಸ್ಯರು
5) ವಿಧಾನಪರಿಷತ್ತಿನ ಸಭಾಪತಿ - ಸದಸ್ಯರು
6) ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರು - ಸದಸ್ಯರು.

ಹಿಂದಿನ ಕಾನೂನು ಸಚಿವರು ಮೇಲ್ಕಂಡ ಸಮಿತಿಯಲ್ಲಿ ಇಲ್ಲದಿರುವುದರಿಂದ, ಅವರಿಂದ ಪ್ರಸ್ತಾವನೆ ಸಲ್ಲಿಸುವ ಅಗತ್ಯವಿಲ್ಲವೆಂದು ದಿನಾಂಕ: 21.03.2023ರಂದು ಕಡತವನ್ನು ಹಿಂದಿರುಗಿಸಿರುತ್ತಾರೆ. ಈತನ್ಮಧ್ಯೆ ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿದ್ದರಿಂದ, ಚುನಾವಣಾ ನೀತಿ ಸಂಹಿತೆ ಮುಕ್ತಾಯಗೊಂಡ ನಂತರ ಮರುಮಂಡಿಸುವಂತೆ ಸೂಚಿಸಿ, ಕಾನೂನು ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ದಿನಾಂಕ: 10.04.2023ರಂದು ಕಡತವನ್ನು ಶಾಖೆಗೆ ಹಿಂದಿರುಗಿಸಿರುತ್ತಾರೆ.

ತದನಂತರ, ಹೊಸ ಸರ್ಕಾರವು ರಚನೆಯಾದ ಕೂಡಲೇ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಇಬ್ಬರು ಸದಸ್ಯರುಗಳನ್ನು ನೇಮಿಸುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಿ, ಪ್ರಕ್ರಿಯೆ ಪ್ರಾರಂಭಿಸಲು ದಿನಾಂಕ: 15.06.2023ರಂದು ಅನುಮೋದನೆ ನೀಡಲಾಗಿರುತ್ತದೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ: 19.06.2023 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು (ಅನುಬಂಧ-2). ಸದರಿ ಅಧಿಸೂಚನೆಯು ದಿನಾಂಕ: 21.06.2023 ರಂದು ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ (ಅನುಬಂಧ-3). ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 20 ದಿನಗಳೊಳಗಾಗಿ ಕಛೇರಿಯ ಕೆಲಸದ ಅವಧಿಯೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರನ್ವಯ ಅರ್ಜಿಗಳು ಸಲ್ಲಿಸುವ ಪ್ರಕ್ರಿಯೆಯು ಪ್ರಾರಂಭವಾಗಿರುತ್ತದೆ. ಅರ್ಜಿಗಳನ್ನು ಸಲ್ಲಿಸುವ ಅವಧಿಯು ದಿನಾಂಕ: 09.07.2023ರಂದು ಕೊನೆಗೊಳ್ಳುತ್ತದೆ. ತದನಂತರ ಮಾನ್ಯ ಸದಸ್ಯರ ನೇಮಕಾತಿಗಾಗಿ ಕ್ರಮಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಮಾನ್ಯ ಅಧ್ಯಕ್ಷರ ಅಧಿಕಾರವಧಿಯು ಮುಕ್ತಾಯಗೊಂಡಿರುವುದರಿಂದ, ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993 ಕಲಂ 22(1) ರನ್ವಯ ಈ ಉದ್ದೇಶಕ್ಕಾಗಿ ಇರುವ ಸಮಿತಿಯಿಂದ ನಾಮ ನಿರ್ದೇಶನ ಮಾಡಲ್ಪಡುವವರನ್ನು ಗೌರವಾನ್ವಿತ ರಾಜ್ಯಪಾಲರು ಅಧ್ಯಕ್ಷರನ್ನಾಗಿ ನೇಮಿಸಿ ಆದೇಶ ಹೊರಡಿಸಬೇಕಾಗಿರುವುದರಿಂದ, ಸದರಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆಯೆಂದು ಕಾನೂನು ಇಲಾಖೆಯು ತಿಳಿಸಿದೆ.

**ಕರ್ನಾಟಕ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರ ಹುದ್ದೆ ಭರ್ತಿ ಮಾಡುವ ಬಗ್ಗೆ.**

ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಜಸ್ಟೀಸ್ ಶ್ರೀ ಸಿ. ಕುಮಾರಸ್ವಾಮಿ ಇವರ ಸೇವಾವಧಿಯು ಮೂರು (03) ವರ್ಷಗಳು ಪೂರೈಸಿದ ಕಾರಣ ಇವರನ್ನು ದಿನಾಂಕ:10.08.2022ರಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಲಾಗಿರುತ್ತದೆ. ಇವರಿಂದ ತೆರವಾದ ಹುದ್ದೆಯು ಖಾಲಿ ಇದ್ದ ಕಾರಣ, ಕರ್ನಾಟಕ ಪೊಲೀಸ್ ಅಧಿನಿಯಮ, 1963ರ ಸೆಕ್ಷನ್ 20(ಸಿ)(1)(i) ರಲ್ಲಿ ಸೂಚಿಸಿರುವಂತೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಗೆ ಮಾನ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಮೂರ್ತಿಗಳ ಶಿಫಾರಸ್ಸಿನೊಂದಿಗೆ ಮೂವರು ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಪಟ್ಟಿಯನ್ನು ಒದಗಿಸುವಂತೆ ದಿನಾಂಕ:06.01.2023ರಲ್ಲಿ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರನ್ನು ಕೋರಲಾಗಿತ್ತು. ಅದರಂತೆ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಪಟ್ಟಿಯನ್ನು ಒದಗಿಸಿದ್ದು, ಸದರಿ ಪಟ್ಟಿಯಲ್ಲಿರುವ ಒಬ್ಬ ನಿವೃತ್ತ ನ್ಯಾಯಾಧೀಶರ ಪಟ್ಟಿಯನ್ನು ಒದಗಿಸಿದ್ದು, ಸದರಿ ಪಟ್ಟಿಯಲ್ಲಿರುವ ಒಬ್ಬ ನಿವೃತ್ತ ನ್ಯಾಯಾಧೀಶರನ್ನು ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆಯೆಂದು ಒಳಾಡಳಿತ ಇಲಾಖೆಯು ತಿಳಿಸಿದೆ.

**ಸಂಖ್ಯೆ: ಸಿಆಸುಇ 130 ಸೇಲೋಇಯು 2023**

(ಸಿದ್ದರಾಮಯ್ಯ)

ಮುಖ್ಯಮಂತ್ರಿ.